# ಕಾಶ್ಮೀರದ ಶೈವಭಕ್ತೆ ಲಲ್ಲೇಶ್ವರಿ

ಸ್ವಾಮಿ ವೀರೇಶಾನಂದ



**ಕಾ**ಶ್ಮೀರವು ಭಾರತದ ಕಿರೀಟಪ್ರಾಯವಾಗಿದೆ. ಪ್ರಕೃತಿದೇವಿ ಅಲ್ಲಿ ನಲಿದಾಡುತ್ತಿದ್ದಾಳೆ. ಸರಸ್ವತಿಯು ನೆಲೆಸಿರುವ ಬೀಡು ಇದು. ಶತಮಾನಗಳಿಂದ ಸಂಸ್ಕೃತ ವಾಙ್ಮಯಕ್ಕೆ ಅಪೂರ್ವ ಕಾಣಿಕೆಯನ್ನು ಕೊಟ್ಟ ಅಭಿನವ ಗುಪ್ತ ಮತ್ತು ಕಲ್ಹಣರಂಥ ಮಹಾನುಭಾವರ ಜನ್ಮಭೂಮಿ ಇದು. ಇದಲ್ಲದೆ ಕಾಶ್ಮೀರ ಶೈವತತ್ತ್ವವು ಇಲ್ಲಿಯೇ ಹುಟ್ಟಿ ಭಾರತದಲ್ಲೆಲ್ಲ ಜನಪ್ರಿಯವಾಯಿತು. ಮಧ್ಯಯುಗದಲ್ಲಿ ಇಸ್ಲಾಂ ಧರ್ಮದ ಸಂಪರ್ಕದಿಂದ ಕಾಶ್ಮೀರವು ಅನೇಕ ಸೂಫೀ ಸಂತರ ತಾಣವೂ ಆಯಿತು. ಹೀಗೆ ಹಿಂದೂ ಧರ್ಮ ಮತ್ತು ಇಸ್ಲಾಂ ಧರ್ಮದ ಸೂಫಿ ತತ್ತ್ವಗಳ ಅಪೂರ್ವ ಬೆಸುಗೆಯು ಕಾಶ್ಮೀರದ ಪುಣ್ಯಭೂಮಿಯಲ್ಲಿ ಆಯಿತು. ಇದರ ಫಲಶ್ರುತಿಯಾಗಿ ಲಲ್ಲೇಶ್ವರಿಯಂಥ ಮಹಾನ್ ಚೈತನ್ಯವೊಂದರ ಉಗಮವಾಯಿತು. ಕಾಶ್ಮೀರದ ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷಿತಿಜದಲ್ಲಿ ಲಲ್ಲೇಶ್ವರಿಯು ಸೂರ್ಯನಂತೆ ಈಗಲೂ ಬೆಳಗುತ್ತಿದ್ದಾಳೆ. ಕಾಶ್ಮೀರಿ ಭಾಷೆಯ ಸಾಹಿತ್ಯದ ಆದಿಕವಿಯೆಂದು ಅವಳನ್ನು ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಗೌರವಿಸುತ್ತಾರೆ. ಆಕೆಯ ವಚನಗಳಲ್ಲಿನ (ವಾಖ್) ಚಮತ್ಕಾರದ ಮಾತುಗಳು ಇಂದಿಗೂ ಕಾಶ್ಮೀರಿ ಆಡುಭಾಷೆಯಲ್ಲಿ ನಾಣ್ಣುಡಿಗಳಾಗಿವೆ; ಅಲ್ಲಿನ ಜನರ ನಾಲಗೆಯಲ್ಲಿ ಇಂದಿಗೂ ನಲಿದಾಡುತ್ತಿವೆ. ನಮ್ಮ ಅಕ್ಕಮಹಾದೇವಿಯಂತೆ ಆಕಾಶವನ್ನೇ ತನ್ನ ಬಟ್ಟೆಯನ್ನಾಗಿ ಮಾಡಿಕೊಂಡಿದ್ದ ಅವಳಿಗೆ ಶಿವನೇ ಸರ್ವಸ್ವವೂ ಆಗಿದ್ದನು. ಆಕೆಯ ಪ್ರಕಾರ ಶಿವನು ಒಬ್ಬ ಪುರುಷ ದೇವತೆಯಲ್ಲ, ವಿಶ್ವವ್ಯಾಪಕ ತತ್ತ್ವ. ಎಲ್ಲವನ್ನೂ ಒಳಗೊಂಡಿರುವ ಚೈತನ್ಯ ಸ್ವರೂಪ. ಅಂಥ ಸರ್ವಾತ್ಮಕ ತತ್ತ್ವದ ಅನುಭೂತಿಯನ್ನು ಲಲ್ಲೇಶ್ವರಿಯು ಪಡೆದುಕೊಂಡಿದ್ದಳು. ಹೀಗೆ ಕಾಶ್ಮೀರ ಶೈವ ಸಿದ್ಧಾಂತಕ್ಕೆ ಅನುಭಾವಿಕ ತಳಹದಿಯನ್ನು ನೀಡಿ, ಅದನ್ನು ಸರ್ವವಂದಿತವನ್ನಾಗಿ ಮಾಡಿದಳು. ತನ್ನ ಶಿವತತ್ತ್ವದಂತೆ, ಕಾಶ್ಮೀರಿ ಸಂಸ್ಕೃತಿಯಲ್ಲಿ (ಕಾಶ್ಮೀರಿಯತ್) ಲಲ್ಲೇಶ್ವರಿಯು ಸರ್ವವ್ಯಾಪಿಯಾಗಿದ್ದಾಳೆ. ಸರ್ವಕಾಲಕ್ಕೂ ಪ್ರೇರಣೆ ನೀಡುವ ಜೀವಸೆಲೆಯಾಗಿದ್ದಾಳೆ. ಹಾಗೆಂದೇ ಎಲ್ಲ ಕಾಶ್ಮೀರಿ ಜನರಿಗೆ ಮೆಚ್ಚಿನ 'ಲಾಲ್ ಅಜ್ಜಿ' ಯಾಗಿದ್ದಾಳೆ.

## ಜನನ ಮತ್ತು ಬಾಲ್ಯ

ಕಾಶ್ಮೀರದ ರಾಜಧಾನಿಯಾದ ಶ್ರೀನಗರಕ್ಕೆ ನಾಲ್ಕೂವರೆ ಮೈಲು ದೂರದಲ್ಲಿ ಪಂದ್ರೆಥಾನ್ (ಪದಮ್‌ಪುರ) ಎಂಬ ಗ್ರಾಮವೊಂದಿದೆ. ಅಲ್ಲಿನ ಕಾಶ್ಮೀರಿ ಪಂಡಿತ ಕುಟುಂಬವೊಂದರಲ್ಲಿ ಕ್ರಿ.ಶ. ೧೩೨೦ರಲ್ಲಿ ಲಲ್ಲೇಶ್ವರಿಯ ಜನ್ಮವಾಯಿತು. ಇನ್ನೊಂದು ಐತಿಹ್ಯದ ಪ್ರಕಾರ ಆಕೆಯ ಜನ್ಮವಾದದ್ದು ೧೩೫೫ರಲ್ಲಿ. ಬಾಲ್ಯದಲ್ಲಿಯೇ ಆಧ್ಯಾತ್ಮಿಕ ಪ್ರವೃತ್ತಿಯನ್ನು ಮೈಗೂಡಿಸಿ ಕೊಂಡಿದ್ದ ಇವಳಿಗೆ ಹನ್ನೆರಡು ವಯಸ್ಸಿನಲ್ಲಿಯೇ ಮದುವೆಯಾಯಿತು. ಗಂಡನ ಮನೆಗೆ ಬಂದ ಲಲ್ಲೇಶ್ವರಿಗೆ, ಅತ್ತೆಯ ಮನೆಯವರು 'ಪದ್ಮಾವತಿ' ಎಂದು ಹೆಸರಿಟ್ಟು ಕರೆಯಲಾರಂಭಿಸಿದರು. ಚಿಕ್ಕ ವಯಸ್ಸಿನ ಸೊಸೆಗೆ ಸಂಸಾರ ಸೌಖ್ಯ ದೊರಕಲಿಲ್ಲ. ಇನ್ನೊಬ್ಬ ಭಕ್ತೆಯಾದ ಸಕ್ಕೂಬಾಯಿಯಂತೆ, ಅತ್ತೆಯಿಂದ ಬೈಗುಳ, ಹೊಡೆತಗಳು ಅವಳಿಗೆ ದೊರೆತವು. ಅಲ್ಲದೆ ಎಳೆವಯಸ್ಸಿನ ಈ ಮುಗ್ಧ ಬಾಲಕಿಯನ್ನು ಉಪವಾಸಗೆಡವಿದಳು ಅತ್ತೆ. ಒಂದು ಕಲ್ಲು ಗುಂಡಿಗೆ ಅನ್ನವನ್ನು ಸವರಿ, ಅನ್ನದ ಉಂಡೆಯಂತೆ ಮಾಡಿ, ಅದನ್ನೇ ಕ್ರೂರಿ ಅತ್ತೆಯು ತನ್ನ ಮನೆ ಸೊಸೆಗೆ ನೀಡುತ್ತಿದ್ದಳಂತೆ. ಅಷ್ಟನ್ನೇ ಉಂಡು, ಭಗವಂತನನ್ನು ಸ್ಮರಿಸುತ್ತ ಶಾಂತವಾಗಿ ಇರುತ್ತಿದ್ದಳು ಲಲ್ಲೇಶ್ವರಿ. ಇದಲ್ಲದೆ ಅತ್ತೆಯು ತನ್ನ ಮಗನ ಹತ್ತಿರ ಅವಳ ವಿರುದ್ಧ ದೂರುತ್ತಿದ್ದಳು. ತನ್ನ ಗಂಡನ ಹತ್ತಿರವೂ ಲಲ್ಲೇಶ್ವರಿಯ ಬಗ್ಗೆ ಚಾಡಿ ಹೇಳುತ್ತಿದ್ದಳು.

ಒಂದು ದಿನ ಲಲ್ಲೇಶ್ವರಿಯು ನೀರಿನ ತೊರೆಯಿಂದ ಗಡಿಗೆಯಲ್ಲಿ ನೀರು ತರುತ್ತಿದ್ದಳು. ಗಂಡ ಹಠಾತ್ತಾಗಿ ದಾರಿಯಲ್ಲಿ ಬಂದನು. ಒಂದು ಕೋಲಿನಿಂದ ಗಡಿಗೆಯನ್ನು ಒಡೆದು ಚೂರು ಚೂರುಮಾಡಿಬಿಟ್ಟನು. ಆಶ್ಚರ್ಯವೆಂದರೆ ಗಡಿಗೆಯ ಚೂರುಗಳು ನೆಲಕ್ಕೆ ಬಿದ್ದವು. ಆದರೆ ನೀರು ಹಾಗೆಯೇ ಗಡಿಗೆಯ ರೂಪದಲ್ಲಿಯೇ ಘನೀಭೂತವಾಗಿಬಿಟ್ಟಿತು. ಈ ನೀರಿನಲ್ಲಿಯೇ ಲಲ್ಲೇಶ್ವರಿ ಮನೆಯಲ್ಲಿನ ಎಲ್ಲ ಗಡಿಗೆಗಳನ್ನೂ ತುಂಬಿಸಿದಳಂತೆ. ''ಅತ್ತೆಯಮ್ಮಾ, ಇನ್ನು ಯಾವುದಾದರೂ ಪಾತ್ರೆಗೆ ನೀರು ತುಂಬಿಸಬೇಕೇನು?'' ಎಂದು ಕೇಳಿದಳು. ಇಲ್ಲವೆಂದಾಗ, ಅದನ್ನು ಹೊರಕ್ಕೆ ಚೆಲ್ಲಿದಳು. ಇದೇ ಈಗ ಒಂದು ಕೆರೆಯಾಗಿದೆ. ಇದನ್ನು ಲಲ್ಲಾ ತ್ರಾಗ್ ಎಂದೇ ಕರೆಯುತ್ತಾರೆ.

ತನ್ನ ಗಂಡನ ಮನೆಯಲ್ಲಿ ತನಗೆಷ್ಟೇ ಕಷ್ಟವಾಗುತ್ತಿದ್ದರೂ, ಸಹನೆಯ ಬಾಳನ್ನು ಲಲ್ಲೇಶ್ವರಿ ಬಾಳಿದಳು. ತ್ಯಾಗ ಮತ್ತು ಶಿಸ್ತುಬದ್ಧ ನಡವಳಿಕೆಯನ್ನು ಪಾಲಿಸಿದಳು. ಇದು ಅತ್ಯಂತ ಅಪೂರ್ವವೇ ಸರಿ.

ಒಮ್ಮೆ ಹಬ್ಬದ ದಿವಸ. ಲಲ್ಲೇಶ್ವರಿ ನದಿಯಲ್ಲಿ ನೀರನ್ನು ತುಂಬಿಸಿಕೊಳ್ಳುತ್ತಿದ್ದಳು. ''ಮನೆಯಲ್ಲಿ ಏನು ವಿಶೇಷದ ಅಡುಗೆ?'' ಎಂದು ಆಕೆಯ ಸ್ನೇಹಿತೆಯರು ಕೇಳಿದರು. ಅದಕ್ಕೆ ಅವಳು ನೀಡಿದ ಉತ್ತರ ಕಾಶ್ಮೀರಿ ಭಾಷೆಯ ಒಂದು ನಾಣ್ಣುಡಿಯೇ ಆಗಿಬಿಟ್ಟಿದೆ. ''ಮನೆಯಲ್ಲಿ ಅಡುಗೆಗೆ ಕುರಿ ಕಡಿದರೇನು, ಕೋಳಿ ಕಡಿದರೇನು? ಲಲ್ಲಾಳಿಗೆ ಸಿಕ್ಕುವುದು ಬರೀ ಮರಳು.'' ಕೊನೆಗೊಮ್ಮೆ ಮನೆಯವರು ಕೊಡುತ್ತಿದ್ದ ಅಸಾಧ್ಯ ಕಿರುಕುಳವನ್ನು ತಾಳಲಾರದೆ ಮನೆ ಬಿಟ್ಟು ನಡೆದಳು ಲಲ್ಲೇಶ್ವರಿ.

ಮನೆಯಲ್ಲಿನ ತಾಪತ್ರಯ, ಅವಮಾನ ಹಾಗೂ ಹಿಂಸೆಗಳಿಂದ ಲಲ್ಲೇಶ್ವರಿಗೆ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಲಲ್ಲೇಶ್ವರಿ ತನ್ನ ಮನಸ್ಸನ್ನು ಅಂತರ್ಮುಖಿಗೊಳಿಸಿ, ಸಾಧನೆಯಲ್ಲಿ ನಿರತಳಾಗಲು ಅದು ಸಹಾಯ ಮಾಡಿತು. ಅವಳು ಏಕಾಂತದಲ್ಲಿ ಯೋಗಸಾಧನೆಯಲ್ಲಿ ತೊಡಗಿದಳು. ಶ್ರೀನಗರದ ಸಿದ್ಧ ಶ್ರೀಕಾಂತ ಎಂಬ ಮಹಾತ್ಮರೇ ಅವಳ ಗುರುಗಳಾಗಿದ್ದರು. ಕಾಶ್ಮೀರದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞನಾದ ಅಭಿನವಗುಪ್ತನು ಹೀಗೆ ಹೇಳುತ್ತಾನೆ: 'ಇಂದ್ರಿಯಗಳನ್ನು ನಿಗ್ರಹಿಸಿದ ವ್ಯಕ್ತಿಯು ಪವಿತ್ರನಾಗಿರುತ್ತಾನೆ; ಎಲ್ಲರನ್ನೂ ಪವಿತ್ರ ಮಾಡುವ ತೀರ್ಥಕ್ಷೇತ್ರದಂತೆ ಇರುತ್ತಾನೆ.' ಲಲ್ಲೇಶ್ವರಿಯು ಈ ಹೇಳಿಕೆಯ ಸಾಕಾರರೂಪಳಾಗಿದ್ದಳು ಎನ್ನಬಹುದು. ಅವಳು ಕಾಶ್ಮೀರ ಶೈವಯೋಗದ ತತ್ತ್ವಗಳನ್ನು ಮತ್ತು ಸಿದ್ಧಾಂತಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದಳು. ಕಾಲಕ್ರಮೇಣ ಅವಳ ದಿವ್ಯಾನುಭವಗಳು ಹೆಚ್ಚು ಹೆಚ್ಚು ಉತ್ಕಟವಾಗುತ್ತ ಹೋದವು. ಅವಳು ಗಳಿಸಿಕೊಂಡ ಜ್ಞಾನರಾಶಿಯು ಹೆಚ್ಚು ಹೆಚ್ಚು ಗಭೀರವಾಗುತ್ತ ಹೋಯಿತು. ಇವೆಲ್ಲ ಲಲ್ಲೇಶ್ವರಿಯನ್ನು ಬಹು ಉನ್ನತ ದರ್ಜೆಯ ಯೋಗಿನಿಯನ್ನಾಗಿ ಪರಿವರ್ತಿಸಿದವು. ವೇದಾಂತದ ಪರಿಶುದ್ಧ ಜಲದಲ್ಲಿ ಅವಳು ಮಿಂದು ಪರಿಶುಭ್ರಳಾದಳು. ಉಪನಿಷತ್ತಿನ ಅಮೃತ ಕ್ಷೀರಧಾರೆಯನ್ನು ಸೇವಿಸಿ ಅಮರಳಾದಳು. ಲಲ್ಲೇಶ್ವರಿ ದೇವಿಯ ವ್ಯಕ್ತಿತ್ವದಲ್ಲಿ ಕಾಶ್ಮೀರ ಶೈವಾಗಮವು ಪುನುರುಜ್ಜೀವನ ಹೊಂದಿತು. ಹೊಸ ಬೆಳಕನ್ನು ಕಂಡುಕೊಂಡಿತು; ಸರ್ವಮಾನ್ಯವಾಯಿತು.

ತನ್ನ ಅನುಭವವನ್ನು ಲಲ್ಲೇಶ್ವರಿಯು ತನ್ನ ಒಂದು ವಚನದಲ್ಲಿ ಹೀಗೆ ತೋಡಿಕೊಂಡಿದ್ದಾಳೆ:

ಶಿವನು ಎಲ್ಲೆಡೆ ಇರುವನು
ಸರ್ವವ್ಯಾಪಿಯು ಅವನು
ಹೀಗಿರಲು ಹಿಂದೂ ಮುಸಲ್ಮಾನರ ನಡುವೆ
ಅದೆಲ್ಲಿದೆ ಭೇದವು?
ಜಾಣನಾದರೆ ನೀನು, ನೀನಾರೆಂದು ತಿಳಿದುಕೋ
ಅದೇ ಭಗವಂತನ ಸಾಕ್ಷಾತ್ಕಾರ
ಎಂದರಿತು ಹಾಗೆ ನಡೆದುಕೋ.

ಲಲ್ಲೇಶ್ವರಿಯು ತನ್ನ ಗುರುವಾದ ಸಿದ್ಧ ಶ್ರೀಕಾಂತ ಗುರುಗಳ ಹತ್ತಿರ ವೇದಾಂತದ ವಿಚಾರವಾಗಿ ಚರ್ಚೆ ನಡೆಸುತ್ತಿದ್ದಳು. ಅಂಥ ಒಂದು ಸಂವಾದ ಹೀಗಿದೆ: ಲಲ್ಲೇಶ್ವರಿಯ ಗಂಡ ಶ್ರೀಕಾಂತ ಗುರುಗಳ ಹತ್ತಿರ ಬಂದನು. ತನ್ನ ಪತ್ನಿಯು ಮನೆಗೆ ಹಿಂತಿರುಗಬೇಕೆಂದು ಆದೇಶ ನೀಡಬೇಕೆಂದು ಕೇಳಿಕೊಂಡನು. ಈ ಮೂವರ ನಡುವೆ ಈ ಮಾತುಕತೆ ನಡೆಯಿತು :

ಪತಿಯ ವಚನ :

ಸೂರ್ಯನ ಬೆಳಕಿಗೆ ಸಮನಾದ ಜ್ಯೋತಿ ಯಾವುದೂ ಇಲ್ಲ
ಗಂಗಾಸ್ನಾನಕ್ಕೆ ಸಮನಾದ ತೀರ್ಥಯಾತ್ರೆ ಯಾವುದೂ ಇಲ್ಲ
ಸಹೋದರನಿಗೆ ಮಿಗಿಲಾದ ಬಂಧುವಿಲ್ಲ;
ಪತ್ನಿ ನೀಡುವ ಸುಖಕ್ಕಿಂತ ಹೆಚ್ಚಿನದು ಬೇರೆ ಇಲ್ಲ.

ಗುರು ಸಿದ್ಧ ಶ್ರೀಕಾಂತರ ವಚನ :

ಹಾಗಲ್ಲ, ಬೆಳಕೆಂದರೆ ಕಣ್ಣಿನ ಹೊಳಪಿಗೆ ಸಮವು
ಇಲ್ಲಿ ಯಾವ ತೀರ್ಥಯಾತ್ರೆಯೂ ಇಲ್ಲ;
ಇದ್ದರೆ ಅದು ಮಹಾತ್ಮನ ಪಾದಗಳೇ ಆಗಿವೆ
ಇಲ್ಲಿ ಯಾವ ಸುಖವೂ ಇಲ್ಲ ;
ಇದ್ದರೆ ಬೆಚ್ಚಗಿನ ಕಂಬಳಿಯ ಸುಖವೇ ಸುಖವದು.

ಲಲ್ಲೇಶ್ವರಿಯ ವಚನ :

ಪರಮಾತ್ಮ ಸತ್ಯಕ್ಕಿಂತ ಹಿರಿದಾದ ಬೆಳಕಿಲ್ಲ
ಭಗವತ್ಪ್ರೇಮಕ್ಕಿಂತ ಮಿಗಿಲಾದ ತೀರ್ಥಯಾತ್ರೆಯಿಲ್ಲ
ಭಗವಂತನಿಗಿಂತ ಪರಮಾಪ್ತ ಬಂಧು ಇನ್ನಾರಿಲ್ಲ.

ಲಲ್ಲೇಶ್ವರಿಗೆ ಗುರುಗಳ ಪೂರ್ಣ ಅನುಗ್ರಹ ಲಭ್ಯವಾಗಿತ್ತು. ಗುರು ಸಿದ್ಧ ಶ್ರೀಕಾಂತರು ಗುರು ಶಬಾದ್ (ಗುರುವಿನ ಆಶೀರ್ವಾದ) ಎಂಬ ದೀಕ್ಷೆಯನ್ನು ಅವಳಿಗೆ ನೀಡಿದರು. ಇದರಿಂದ

ಅವಳಲ್ಲಿ ಬಹಳ ಪರಿಣಾಮಕಾರಿಯಾದ ಆಧ್ಯಾತ್ಮಿಕ ಪರಿವರ್ತನೆ ಉಂಟಾಯಿತು. ಈ ವಿಷಯದಲ್ಲಿ ಲಲ್ಲೇಶ್ವರಿಯ ವಚನ ಹೀಗಿದೆ:

ನನ್ನ ಗುರು ನನಗೆ ನೀಡಿದರು ಗುರುದೀಕ್ಷೆಯಂದು
ವಜ್ರಾಘಾತದಂತೆ ಬಡಿಯಿತು ಅದು ನನ್ನ ಶಿರದ ಮೇಲೆ
ಅಜ್ಞಾನದ ಪರದೆ ಹರಿದು ಸಾಕ್ಷಾತ್ಕಾರದ ಬೆಳಕು ಬಂತು
ಆತ್ಮದ ಅನುಭಾವದಲಿ ಸ್ವತಂತ್ರನಾಗಿ ನರ್ತಿಸಿದೆ,
ಮನದುಂಬಿ ಬಂದು.

ತಾನು ಗುರೂಪದೇಶದಿಂದ ಪಡೆದ ಅನುಭೂತಿಯನ್ನು ಲಲ್ಲೇಶ್ವರಿ ಇನ್ನೂ ಹಲವಾರು ವಚನಗಳಲ್ಲಿ ಹೃದಯಂಗಮವಾಗಿ ಬಣ್ಣಿಸಿದ್ದಾಳೆ. ಇದೇ ಬಗೆಯ ಅನುಭವ ಮೀಮಾಂಸೆಯನ್ನು ಒಂದು ಶತಮಾನ ಕಳೆದ ನಂತರ ಹುಟ್ಟಿಬಂದ ಕಬೀರ, ರಾಮಾನಂದ, ಗುರು ನಾನಕ್ ಅವರ ವಚನಗಳಲ್ಲಿಯೂ ಕಾಣಬಹುದು. ಅವರೆಲ್ಲರೂ ಮಧ್ಯಕಾಲೀನ ಯುಗದ ಭಕ್ತಿ ಸಂಪ್ರದಾಯದ ಮೇರುಶಿಖರಗಳು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಕಾಶ್ಮೀರಿ ಭಾಷೆಯ ಸಮೃದ್ಧತೆಗೆ ಲಲ್ಲೇಶ್ವರಿ ನೀಡಿದ ಕೊಡುಗೆ ಅಪಾರ. ಅವಳು ತನ್ನ ವಚನದಲ್ಲಿ ಉಪಯೋಗಿಸಿದ ನೂರಾರು ನಾಣ್ಣುಡಿಗಳು, ಒಗಟುಗಳು, ಆಗಿನ್ನೂ ಶೈಶವಾವಸ್ಥೆಯಲ್ಲಿ ಇದ್ದ ಆ ಭಾಷೆಗೆ ನವಜೀವನವನ್ನೂ ಕ್ರಿಯಾಶೀಲತೆಯನ್ನೂ ದೊರಕಿಸಿ ಕೊಟ್ಟವು. ಹೀಗೆ ಕಾಶ್ಮೀರಿ ಭಾಷೆಯು ಸಂಪದ್ಭರಿತವಾಯಿತು. ಅವಳು ರೂಪಿಸಿದ ಅರ್ಥಗರ್ಭಿತವಾದ ನಾಣ್ಣುಡಿಗಳು ಅಧ್ಯಾತ್ಮ ಮತ್ತು ತಾತ್ತ್ವಿಕ ಚಿಂತನೆಗಳ ಗಂಭೀರತೆಯನ್ನು ಸಮರ್ಥವಾಗಿ ಪ್ರತಿಪಾದಿಸಲು ಶಕ್ತವಾದವು. ಕಾಶ್ಮೀರಿ ಜನತೆಯು ತಮ್ಮ ಭಾವನೆಗಳನ್ನು ಸಂವಹನ ಮಾಡಲು ಬಹಳ ಸಮರ್ಥವಾದ ಮಾಧ್ಯಮವನ್ನಾಗಿ ಕಾಶ್ಮೀರಿ ಭಾಷೆಯನ್ನು ರೂಪಿಸಿದವು.

ಲಲ್ಲೇಶ್ವರಿಯು ಹಿಂದೂಗಳು ಮತ್ತು ಮುಸ್ಲಿಮರು – ಇಬ್ಬರಿಗೂ ಪೂಜ್ಯಳಾಗಿದ್ದಾಳೆ. ಹಿಂದೂಗಳು ಅವಳನ್ನು ಲಲ್ಲೇಶ್ವರಿ ಎಂದು ಕರೆದರೆ, ಮುಸ್ಲಿಮರು ಅವಳನ್ನು ಲಲ್ಲಾ ಅರಿಫಾ ಎಂದು ಕರೆಯುತ್ತಿದ್ದರು. ಇಬ್ಬರಿಗೂ ಅವಳು ಮೆಚ್ಚಿನ ಲಾಲ್ ಡೆಡ್ (ಲಾಲ್ ಅಜ್ಜಿ) ಆಗಿದ್ದಳು.

ಲಲ್ಲೇಶ್ವರಿ ಒಬ್ಬ ಪರಿವ್ರಾಜಕ ಉಪದೇಶಕಿಯಾಗಿದ್ದಳು. ನಗ್ನಳಾಗಿಯೇ ಊರಿಂದ ಊರಿಂದ ಓಡಾಡುತ್ತಿದ್ದಳು. ಒಂದು ಊರಿನಲ್ಲಿ ಪೋಲಿ ಯುವಕರ ಗುಂಪೊಂದು ಅವಳನ್ನು ಅಪಹಾಸ್ಯಕ್ಕೆ ಈಡುಮಾಡಿತು. ಅವಳು ಅಪಮಾನಕ್ಕೆ ಒಳಗಾದಳು. ಒಬ್ಬ ಬಟ್ಟೆ ಮಾರುವ ವರ್ತಕ ಇದನ್ನು ನೋಡಿದ. ಧಾರ್ಮಿಕ ವ್ಯಕ್ತಿಯಾಗಿದ್ದ ಅವನು ಆ ಯುವಕರನ್ನು ಬಯ್ದು ಓಡಿಸಿದ. ಲಲ್ಲೇಶ್ವರಿ ಅವನ ಬಳಿ ಎರಡು ತುಂಡು ಬಟ್ಟೆ ಕೇಳಿದಳು. ಅವನ್ನು ತನ್ನ ಎರಡು ಕಂಕಳುಗಳಲ್ಲಿ ಇಟ್ಟುಕೊಂಡಳು. ಜನರು ತನ್ನನ್ನು ಹೊಗಳಿದಾಗ, ಒಂದು ಬಟ್ಟೆಗೆ ಒಂದು ಗಂಟು ಹಾಕುವಳು. ಜನರು ನಿಂದಿಸಿದಾಗ, ಇನ್ನೊಂದು ಬಟ್ಟೆಗೆ ಒಂದು ಗಂಟು ಹಾಕುವಳು. ಹೀಗೆ ಸಂಜೆಯ ತನಕ ಊರಲ್ಲೆಲ್ಲ ಓಡಾಡಿದಳು. ಕಡೆಗೆ ಆ ವರ್ತಕನ ಅಂಗಡಿಗೇ ವಾಪಸ್ಸು ಬಂದಳು. ಎರಡೂ ಬಟ್ಟೆಗಳನ್ನು ತೂಕ ಹಾಕುವಂತೆ ಹೇಳಿದಳು. ಅವುಗಳ ತೂಕದಲ್ಲಿ ಒಂದು ಸ್ವಲ್ಪವೂ ವ್ಯತ್ಯಾಸವಿರಲಿಲ್ಲ. ಹೀಗೆ ಸ್ತುತಿನಿಂದೆಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂಬ ಪಾಠವನ್ನು ಆ ಬಟ್ಟೆ ವ್ಯಾಪಾರಿಗೆ ಮನಗಾಣಿಸಿದಳು. 'ತುಲ್ಯನಿಂದಾಸ್ತುತಿರ್ಮೌನೀ' ಎಂಬ ಗೀತಾವಾಕ್ಯದ ಸಾಕ್ಷಾತ್ ನಿದರ್ಶನವಾಗಿದ್ದಳು ಲಲ್ಲೇಶ್ವರಿ.

ಕಾಶ್ಮೀರದ ಅತ್ಯಂತ ಜನಪ್ರಿಯ ಧಾರ್ಮಿಕ ಮುಖಂಡಳಾದಳೂ, ಲಲ್ಲೇಶ್ವರಿಯ ಜೀವನದ ಬಗ್ಗೆ ನಮಗೆ ಗೊತ್ತಿರುವ ವಿಷಯಗಳು ಅತ್ಯಲ್ಪ. ತನ್ನ ಜೀವನದ ಅಂತ್ಯಕಾಲದಲ್ಲಿ ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿನ ಬಿಜ್ಬೆಹ್ರಾ ನಗರಕ್ಕೆ ಹೋದಳು. ಅಲ್ಲಿ ಅವಳು ದೇಹತ್ಯಾಗ ಮಾಡಿದಳು ಎಂಬ ಐತಿಹ್ಯವಿದೆ. ಅಂತ್ಯಸಂಸ್ಕಾರದ ವಿಷಯದಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಘರ್ಷಣೆ ಏರ್ಪಟ್ಟಿತು. ಆಗ ಲಲ್ಲೇಶ್ವರಿಯ ಆತ್ಮವು ರುಂಡವನ್ನು ಒಂದು ಪಾತ್ರೆಯಿಂದ ಮತ್ತು ಮುಂಡವನ್ನು ಒಂದು ಪಾತ್ರೆಯಿಂದ ಮುಚ್ಚುವಂತೆ ಹೇಳಿತಂತೆ. ಹಾಗೆ ಮಾಡಿದಾಗ, ರುಂಡ ಮುಂಡಗಳು ಆ ಎರಡು ಪಾತ್ರೆಗಳಲ್ಲಿ ಅಡಗಿಹೋದವು. ಕಡೆಗೆ ಕೇವಲ ನೀರು ಮಾತ್ರ ಆ ಪಾತ್ರೆಗಳಲ್ಲಿ ಕಾಣಿಸಿಕೊಂಡಿತು. ಆ ಎರಡು ಪಾತ್ರೆಗಳನ್ನು ಹಿಂದೂಗಳು ಮತ್ತು ಮುಸ್ಲಿಮರು ಕೊಂಡೊಯ್ದು ತಮ್ಮ ತಮ್ಮ ಪದ್ಧತಿಯ ಪ್ರಕಾರ ಅಂತಿಮ ಸಂಸ್ಕಾರ ಮಾಡಿಕೊಂಡರು.

ಲಲ್ಲೇಶ್ವರಿಯು ಯಾವುದೇ ಒಂದು ನಿರ್ದಿಷ್ಟ ಧರ್ಮವನ್ನು ಬೋಧಿಸಲಿಲ್ಲ. ಯಾವುದೇ ಬಗೆಯ ಆಚರಣೆಯನ್ನೂ ಅವಳು ಉಪದೇಶಿಸಲಿಲ್ಲ. ಸಾಮರಸ್ಯದ ಜೀವನವನ್ನು ಅವಳು ಜನರಿಗೆ ಹೇಳಿಕೊಟ್ಟಳು. ಅವಳು ಬೋಧಿಸಿದ ಜೀವನಶೈಲಿಯು ಹಿಂದೂ, ಬೌದ್ಧ ಮತ್ತು ಇಸ್ಲಾಂ ಧರ್ಮಗಳ ಉತ್ತಮ ಅಂಶಗಳ ಸುಂದರ ಬೆಸುಗೆಯಾಗಿದೆ. ಜನರು ತಮ್ಮ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು; ಗೌರವದಿಂದ ಘನತೆವೆತ್ತ ಜೀವನವನ್ನು ಬಾಳಬೇಕು ಎಂಬುದೇ ಲಲ್ಲೇಶ್ವರಿಯ ಸಂದೇಶವಾಗಿದೆ. ಅವಳ ಈ ಸಂದೇಶವು ಹಿಂದೂಗಳ ಮನಸ್ಸನ್ನು ಮಾತ್ರವಲ್ಲ, ಆಗಿನ ಕಾಲದ ಮುಸ್ಲಿಂ ಸಂತರ ಮನಸ್ಸನ್ನೂ ಸೂರೆಗೊಂಡಿತು. ಭಗವಂತನ ಮಕ್ಕಳನ್ನು ಒಬ್ಬನೇ ದೇವರ ಹೆಸರಿನಲ್ಲಿ ಭಾವನಾತ್ಮಕವಾಗಿ ಒಗ್ಗೂಡಿಸುವ ಮಹಾನ್ ಕಾರ್ಯವನ್ನು ಲಲ್ಲೇಶ್ವರಿ ಮಾಡಿದ್ದಾಳೆ ಎಂದು ಅವರ ಅಭಿಪ್ರಾಯವಾಗಿದೆ. ಕಾಶ್ಮೀರದ ಸೂಫಿ ಸಂತರಲ್ಲಿ ಅಗ್ರಗಣ್ಯರಾದ ಶೇಕ್ ನೂರ್ ಉದ್ ದಿನ್ ನೂರಾನಿ ಈ ಕೆಳಗಿನ ಮಾತುಗಳ ಮೂಲಕ ಲಲ್ಲೇಶ್ವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾರೆ: ''ಪದಮ್‌ಪುರದ ಲಲ್ಲಾ ಅಮೃತ ಧಾರೆಯ ಪ್ರವಾಹದ ಜೇನಿನ ಹನಿಗಳನ್ನು ಸವಿದಿದ್ದಾಳೆ. ಅಮರ ದಿವ್ಯತೆಯ ಅವತಾರಸ್ವರೂಪಳಾಗಿದ್ದಾಳೆ ಅವಳು. ಓ ಕರುಣಾಳು ಭಗವಂತನೇ, ನನಗೂ ಈ ವರವನ್ನು ನೀಡು.''